# ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಶಹಾಬಾದ

**CC.No 801/2024**

**CW : 01 PW: 01**

**ಸಾಕ್ಷಿಯನ್ನು ಪ್ರಮಾಣೀಕರಿಸಿದ ದಿನಾಂಕ : 27.03.2026**

| | |
|---|---|
| ಹೆಸರು | : ನಿರ್ವಾಣಪ್ಪ ಒಡೆಯರ |
| ತಂದೆಯ ಹೆಸರು | : ಈಶ್ವರಪ್ಪ ಒಡೆಯರ |
| ವಯಸ್ಸು | : 49 |
| ಉದ್ಯೋಗ | : ಕೂಲಿ |
| ವಾಸಸ್ಥಳ | : ಬಳವಡಗಿ |

**<u>ಮುಖ್ಯ ವಿಚಾರಣೆ : ಸಹಾಯಕ ಸರ್ಕಾರಿ ಅಭಿಯೋಜಕರಿಂದ</u>**

ನನಗೆ ಚಾಸಾ-8 ನನ್ನ ಹೆಂಡತಿ, ಚಾಸಾ-9 ನನ್ನ ಸಹೋದರ, ಚಾಸಾ-2 ರಿಂದ 7 ಮತ್ತು 10 ಇವರ ಪರಿಚಯ ಇರುತ್ತದೆ. ಆರೋಪಿತನು ನನ್ನ ಮಗ ಆಗಬೇಕು.. ಮೃತ ವಿಶ್ವನಾಥ ನನ್ನ ಮಗ ಆಗಬೇಕು. ಅವರು ಅಪಘಾತದಲ್ಲಿ ತೀರಿ ಹೋಗಿರುತ್ತಾರೆ.

ಯಾವ ಯಾವ ವಾಹಗಳ ಮಧ್ಯೆ ಹಾಗೂ ಯಾವ ದಿನಾಂಕ, ಸಮಯ ಮತ್ತು ಜಾಗೆಯಲ್ಲಿ ಆಗಿರುತ್ತದೆ ಎಂದು ನನಗೆ ಹೇಳಲು ಬರುವುದಿಲ್ಲ. ಈ ಅಪಘಾತವು ಯಾರ ತಪ್ಪಿನಿಂದ ಆಗಿರುತ್ತದೆ ಎಂದು ನನಗೆ ಹೇಳಲು ಬರುವುದಿಲ್ಲ. ಸದರಿ ಅಪಘಾತವು ಯಾರಿಂದ ಆಗಿರುತ್ತದೆ ಎಂದು ನನಗೆ ಹೇಳಲು ಬರುವುದಿಲ್ಲ. ಈ ಪ್ರಕರಣದಲ್ಲಿ ನಾನು ಪೋಲೀಸರ ಮುಂದೆ ಯಾವುದೇ ದೂರು ನೀಡಿರುವುದಿಲ್ಲ. ಪಂಚನಾಮೆಗೆ ಜಾಗೆ ತೋರಿಸಿರುವುದಿಲ್ಲ.

ಈ ಹಂತದಲ್ಲಿ ಸಾಕ್ಷಿಗೆ ಕಡತದಲ್ಲಿರುವ ಒಂದು ದಾಖಲೆಯನ್ನು ತೋರಿಸಿದ್ದು, ಅದು ಫಿರ್ಯಾದಿಯಾಗಿದ್ದು ಅದನ್ನು ನಿ.ಪಿ.1 ಎಂದು, ಸಾಕ್ಷಿದಾರರ ಸಹಿಯನ್ನು ನಿ.ಪಿ.1 (ಎ) ಎಂದು ನಿಶಾನೆಗೊಳಿಸಲಾಯಿತು. ಪಂಚನಾಮೆಗೆ ನಾನು ಜಾಗೆಯನ್ನು ತೋರಿಸಿರುವುದಿಲ್ಲ.

ಸಾಕ್ಷಿಗೆ ಕಡತದಲ್ಲಿರುವ ಒಂದು ಭಾವಚಿತ್ರವನ್ನು ತೋರಿಸಿದ್ದು, ಅದನ್ನು ನೋಡಿ ಸಾಕ್ಷಿಯು ಗುರುತಿಸಿದ್ದು, ಅದನ್ನು ನಿ.ಪಿ.2 ಎಂದು ನಿಶಾನೆಗೊಳಿಸಲಾಯಿತು, ನಿ.ಪಿ.2 ನ್ನು ಯಾವ ಕಾರಣಕ್ಕೆ ತೆಗೆದಿರುತ್ತಾರೆ ಎಂದು ನನಗೆ ಹೇಳಲು ಬರುವುದಿಲ್ಲ.

ನಿ.ಪಿ.1 ರ ಮೇಲೆ ಯಾವ ಕಾರಣಕ್ಕಾಗಿ ಸಹಿ ಹಾಕಿರುತ್ತೇನೆ ಎಂದು ನನಗೆ ಹೇಳಲು ಬರುವುದಿಲ್ಲ. ಸದರಿ ನಿ.ಪಿ.1 ಮತ್ತು 2 ರಲ್ಲಿ ಬರೆದಿರುವ ಸಂಗತಿಗಳ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ನಾನು ಪೋಲೀಸರಿಗೆ ಯಾವುದೇ ದೂರನ್ನು ನೀಡಿರುವುದಿಲ್ಲ ಹಾಗೂ ಹೇಳಿಕೆ ಮತ್ತು ಪುನರ ಹೇಳಿಕೆ ನೀಡಿರುವುದಿಲ್ಲ. ಇದನ್ನು ಹೊರತುಪಡಿಸಿ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇರುವುದಿಲ್ಲ.

**(ಈ ಹಂತದಲ್ಲಿ ಸ.ಸ.ಅ ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ಕೋರಿರುತ್ತಾರೆ, ಅನುಮತಿ ನೀಡಲಾಯಿತು)**

**<u>ಪಾಟೀ ಸವಾಲು : ಸಹಾಯಕ ಸರ್ಕಾರಿ ಅಭಿಯೋಜಕರಿಂದ</u>**

ದಿ: 16/09/2023 ರಂದು 11 ಗಂಟೆ ಸುಮಾರಿಗೆ ನಾನು ವಾಡಿಯಿಂದ ಬೆಂಗಳೂರಿಗೆ ಹೊರಟು ದಿ: 17/09/2023 ರಂದು ಬೆಂಗಳೂರಿನಲ್ಲಿ ಇದ್ದೆ ಎಂದರೆ ಸರಿಯಲ್ಲ. ದಿ: 18/09/2023 ರಂದು ಬೆಳಿಗ್ಗೆ 10 ರ ಸುಮಾರಿಗೆ ಚಾಸಾ-9 ರವರು ಆನಂದಕುಮಾರ ಇತನ

ಮೋಟರ ಸೈಕಲ ನಂ ಕೆ.ಎ-32, ಇ.ಎಫ್.4440 ನೇದ್ದರ ಮೇಲೆ ಮೃತ ವಿಶ್ವನಾಥ ಇತನಿಗೆ ಕೂರಿಸಿಕೊಂಡು ಬರುವಾಗ ರಸ್ತೆ ಅಪಘಾತ ಆಗಿರುತ್ತದೆ ಎಂದು ತಿಳಿಸಿರುತ್ತಾರೆ ಎಂದರೆ ಸರಿಯಲ್ಲ.

ಸದರಿ ಅಪಘಾತವು ಆನಂದಕುಮಾರ ಇತನು ಮೋಟರ ಸೈಕಲನ್ನು ಅತೀ ವೇಗ ಮತ್ತು ಅಲಕ್ಷತನದಿಂದ ಓಡಿಸಿದ್ದರಿಂದ ವಿಶ್ವನಾಥ ಇತನಿಗೆ ಅಪಘಾತ ಆಗಿರುತ್ತದೆ ಎಂದರೆ ಸರಿಯಲ್ಲ. ಅಪಘಾತದಲ್ಲಿ ಮೃತ ವಿಶ್ವನಾಥನಿಗೆ ಹಣೆಗೆ, ಗದ್ದಕ್ಕೆ ರಕ್ತಗಾಯ ಆಗಿರುತ್ತವೆ ಎಂದು ತಿಳಿಸಿರುತ್ತಾರೆ ಎಂದರೆ ಸರಿಯಲ್ಲ. ಆನಂದಕುಮಾರ ಇತನಿಗೂ ಸಹ ಬಲಗೈ ಬಲಗಾಲುಗಳಿಗೆ ತರಚಿದ ಗಾಯಗಳು ಆಗಿರುತ್ತವೆ ಎಂದು ತಿಳಿಸಿರುತ್ತಾರೆ ಎಂದರೆ ಸರಿಯಲ್ಲ. ಮೃತ ವಿಶ್ವನಾಥ ಇತನಿಗೆ ಕಲಬುರಗಿಯ ಜೀವನ ಜ್ಯೋಗಿ ಆಸ್ಪತ್ರೆಗೆ ಸೇರಿಸಿದ್ದು, ಆತನಿಗೆ ಆಪರೇಷನ್ ಮಾಡುವುದಾಗಿ ವೈದ್ಯರು ತಿಳಿ ಹೇಳಿದ್ದಾರೆ ಅಂತ ಚಾಸಾ-9 ರವರು ನನಗೆ ತಿಳಿಸಿರುತ್ತಾರೆ ಎಂದರೆ ಸರಿಯಲ್ಲ.

ದಿ: 19/09/2023 ರಂದು ಬೆಳಿಗ್ಗೆ 10 ಗಂಟೆ ಸುಮಾರಿಗೆ ಕಲಬುರಗಿಯ ಜೀವನ ಜ್ಯೋತಿ ಆಸ್ಪತ್ರೆಗೆ ಹೋಗಿ ಉಪಚಾರ ಪಡೆಯುತ್ತಿದ್ದ ನನ್ನ ಮಗನಾದ ಮೃತ ವಿಶ್ವನಾಥನಿಗೆ ನೋಡಿರುತ್ತೇನೆ ಎಂದರೆ ಸರಿಯಲ್ಲ. ಆತನಿಗೆ ಆಪರೇಷನ್ ಮಾಡಿಸಿರುತ್ತೇನೆ ಎಂದರೆ ಸರಿಯಲ್ಲ. ತಡಮಾಡಿ ಠಾಣೆಗೆ ಬಂದು ಅಪಘಾತದ ಕುರಿತು ನಿ.ಪಿ.1 ರಂತೆ ಪೋಲೀಸರಿಗೆ ದೂರು ನೀಡಿರುತ್ತೇನೆ ಎಂದರೆ ಸರಿಯಲ್ಲ. ಪೋಲೀಸರಿಗೆ ಪಂಚನಾಮೆಗೆ ಜಾಗೆಯನ್ನು ತೋರಿಸಿರುತ್ತೇನೆ ಎಂದರೆ ಸರಿಯಲ್ಲ.

ಪಂಚನಾಮೆ ಸಮಯದಲ್ಲಿ ನಿ.ಪಿ.2 ರಂತೆ ಭಾವಚಿತ್ರ ತೆಗೆದಿರುತ್ತಾರೆ ಎಂದರೆ ಸರಿಯಲ್ಲ. ದಿ: 13/12/2023 ರಂದು ಉಪಚಾರ ಫಲಕಾರಿಯಾಗದೇ ವಿಶ್ವನಾಥ ಮೃತಪಟ್ಟಿರುತ್ತಾನೆ ಅಂತ ಪೋಲೀಸರಿಗೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಈಗ ಓದಿ ಹೇಳಲಾದ ಹೇಳಿಕೆಯನ್ನು ಸಾಕ್ಷಿಯು ಅಲ್ಲಗಳೆದ್ದು, ಅದನ್ನು ನಿ.ಪಿ.3 ಎಂದು ನಿಶಾನೆಗೊಳಿಸಲಾಯಿತು. ನಿ.ಪಿ.1 ರಿಂದ 3 ರಲ್ಲಿ ಬರೆದಿರುವ ಸಂಗತಿಗಳ ಬಗ್ಗೆ ನನಗೆ ಮಾಹಿತಿ ಇದ್ದರೂ ಸಹ ಆರೋಪಿತನು ನನ್ನ ಮಗ ಆದ ಕಾರಣ ಆತನಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲು : ಆರೋಪಿ ಪರ ವಕೀಲರಿಂದ</u>**

ಪಾಟೀ ಸವಾಲು ಇರುವುದಿಲ್ಲ.

**ಮರುವಿಚಾರಣೆ:** ಇರುವುದಿಲ್ಲ

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ. ಹೇ. ಕೇ. ಸರಿ ಇದೆ.**

**Sd/-**

**ಪ್ರ.ದ.ನ್ಯಾ.ದಂ.ಗಳು, ಶಹಾಬಾದ**